ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.**262/2023**

| | | |
|---|---|---|
| ಸಾಕ್ಷಿದಾರರ ಹೆಸರು | ಶೇಕ್ ಇಫ್ತಿಕಾರ್ | ಸಿ.ಡಬ್ಲ್ಯೂ 5 ಪಿ.ಡಬ್ಲ್ಯೂ 5 |
| ತಂದೆಯ ಹೆಸರು | ಮೊಹಮದ್ ಜಾನ್ | |
| ವಯಸ್ಸು | 46 ವರ್ಷ | |
| ಉದ್ಯೋಗ | ಕೂಲಿ ಕೆಲಸ | |
| ವಾಸ ಸ್ಥಳ | ದೇವರಮಕ್ಕಿ ಗ್ರಾಮ,<br>ಗೋಣಿಬೀಡು ಹೋಬಳಿ,<br>ಮೂಡಿಗೆರೆ ತಾ: | |

ದಿನಾಂಕಃ 29.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ** ಪ್ರಭಾರ **ಸ.ಸ.ಅ.ರವರಿಂದಃ**

1. ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಗೊತ್ತು. ಚಾಸಾ.4 ಶಿವ ನನಗೆ ಗೊತ್ತು. ಈಗ ನಾನು ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಮಾಲು ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ.6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.6(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ನಿ.ಪಿ.7 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ.

2. ಈಗ ನಾನು ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಮಾಲು ಅಮಾನತ್ತು ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ.8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ನಿ.ಪಿ.9 ರಿಂದ 12 ಛಾಯಚಿತ್ರಗಳಲ್ಲಿ ನಾನು ಹಾಜರಿರುತ್ತೇನೆ. ಸದರಿ ಸಹಿಗಳನ್ನು 2 ವರ್ಷಗಳ ಹಿಂದೆ ಮಾಡಿದ್ದೇನೆ, ಎಲ್ಲಿ ಮಾಡಿದ್ದೇನೆ ಎಂದು ಈಗ ನೆನಪಲ್ಲ. ಯಾವ ವಿಚಾರಕ್ಕೆ ಆ ಸಹಿಗಳನ್ನು ಮಾಡಿದ್ದೇನೆ ಎಂದು ನೆನಪಿಲ್ಲ. ನಿ.ಪಿ.7 ರಲ್ಲಿ ಕಂಡು ಬರುವ

ಮೊಬೈಲ್ ಅನ್ನು ನಾನು ನೋಡಿರುವುದಿಲ್ಲ. ನಿ.ಪಿ.9 ರಿಂದ 12 ರ ಛಾಯಚಿತ್ರದಲ್ಲಿ ಕಂಡು ಬರುವ ಹಣದ ಬಗ್ಗೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

3. ದಿಃ 17.07.2022 ರಂದು 4.30 ರಿಂದ 5.30 ರ ಸಮಯದಲ್ಲಿ ಆರೋಪಿಯ ಮನೆಯ ಬಳಿ ನಾನು ನಿ.ಪಿ.8 ಕ್ಕೆ ಸಹಿ ಮಾಡಿದ್ದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಮತ್ತು ಚಾಸಾ.6 ರವರು ಹಾಜರಿದ್ದೆವು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿ ಹಾಜರಿದ್ದು, ತನ್ನ ಮನೆಯ ಗಾಡ್ರೇಜ್ ಬೀರುವಿನಲ್ಲಿ 3 ಲಕ್ಷ ಹಣವನ್ನು ಇಟ್ಟಿದ್ದು, ಅದನ್ನು ನಮ್ಮ ಸಮಕ್ಷಮದಲ್ಲಿ ಪೊಲೀಸರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಆ ಹಣವನ್ನು ಪ್ರಾಥಮಿಕ ಶಾಲೆಯ ಅಕ್ಷರ ದಾಸೋಹ ಖಾತೆಯಿಂದ ನನ್ನ ಖಾತೆಗೆ ವರ್ಗಾವಣೆ ಮಾಡಿಸಿಕೊಂಡು ಇಟ್ಟಿದ್ದ ಹಣ ಎಂದು ಆರೋಪಿ ಹೇಳಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ಆ ಹಣವನ್ನು ಬಿಳಿ ಬಟ್ಟೆಯಲ್ಲಿ ವಶಕ್ಕೆ ಪಡೆದು ನಿ.ಪಿ.8 ರಂತೆ ಮಹಜರ್ ಮಾಡಿ ಛಾಯಚಿತ್ರಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ.

4. ಅದೇ ದಿನ ಮಧ್ಯಾಹ್ನ 3.00 ರಿಂದ 4.00 ರ ಸುಮಾರಿಗೆ ಗೋಣಿಬೀಡು ಪೊಲೀಸ್ ಠಾಣೆಯ ಆವರಣದಲ್ಲಿ ನಿ.ಪಿ.7 ಛಾಯಚಿತ್ರದಲ್ಲಿ ಕಂಡು ಬರುವ ಮೊಬೈಲ್ ಅನ್ನು ತಮ್ಮ ವಶಕ್ಕೆ ನಿ.ಪಿ.6 ಮಹಜರ್ ನಂತೆ ಪೊಲೀಸರು ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ಆ ಮೊಬೈಲ್ ಅನ್ನು ಆನ್ ಮಾಡಿದಾಗ ಅದರ ಸ್ಕ್ರೀನ್ ಹೊಡೆದು ಹೋಗಿತ್ತು, ಆ ಮೊಬೈಲ್ ನಲ್ಲಿ ವಹಿದಾ ಬಾನು ಮತ್ತು ಅಕ್ಷರ ದಾಸೋಹದ ಖಾತೆಗಳು ಕಂಡು ಬಂದಿದ್ದವು ಎಂದರೆ ಸರಿಯಲ್ಲ. ಆ ಮೊಬೈಲ್ ಅನ್ನು ನನ್ನ ಸಮಕ್ಷಮದಲ್ಲಿ ಬಿಳಿ ಬಟ್ಟೆಯಲ್ಲಿ ಸುತ್ತಿ ವಶಕ್ಕೆ ಪಡೆದು ಮಹಜರ್ ಗೆ ನಮ್ಮ ಸಹಿ ಪಡೆದಿದ್ದರು ಎಂದರೆ ಸರಿಯಲ್ಲ. ನಿ.ಪಿ.7 ಛಾಯಚಿತ್ರವನ್ನು ಸಹ ಆ ಸಮಯದಲ್ಲಿ ತೆಗೆದರು ಎಂದರೆ ಸರಿಯಲ್ಲ. ನಿ.ಪಿ.6

ಮತ್ತು 8 ಮಹಜರ್ ನ ವಿಚಾರ ನನಗೆ ತಿಳಿದಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಕೆ.ಎಂ.ಪಿ. ವಕೀಲರಿಂದ – ಆರೋಪಿತನ ಪರವಾಗಿ

5. ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ